


## ಸಚಿವರ ಸಂವಾದ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಕಾಲಜಿ ಮತ್ತು ರಿಸರ್ಚ್ ನಗರದಲ್ಲಿ ಆಯೋಜಿಸಿದ್ದ 'ಗ್ರಾಮೀಣ ಪ್ರದೇಶದಲ್ಲಿ ಮನಃಶಾಸ್ತ್ರ ಕ್ಷೇತ್ರದಲ್ಲಿರುವ ಉದ್ಯೋಗ ಅವಕಾಶಗಳು' ಕುರಿತ ಕಾರ್ಯಾಗಾರದಲ್ಲಿ ಸಚಿವ ಬಿ.ಎನ್. ಬಚ್ಚೇಗೌಡ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು.




## ಕಾರ್ಯಾಗಾರ

ಬೆಂವಿವಿಯಲ್ಲಿ ನಡೆದ 'ಜೀವ ವೈವಿಧ್ಯತೆಯ ಅರಿವು ಮತ್ತು ಉಪಯುಕ್ತತೆ' ಕಾರ್ಯಾಗಾರ ಸಮಾರೋಪದಲ್ಲಿ ಡಾ।ಎಂ.ರಾಮಚಂದ್ರ ಮೋಹನ್, ಡಾ।ಜಿ.ರಾಜರಾಮರೆಡ್ಡಿ, ಡಾ।ಎಂ.ಮಹದೇವಪ್ಪ, ಎ.ಕೆ.ಚಕ್ರವರ್ತಿ, ಡಿ.ಜಿ.ನಾಯ್ಕ ಇದ್ದರು.

**ಿಬಿರ ಏರ್ಪಡಿಸಿದೆ. ಆಸಕ್ತರು ವಿವರಗಳಿಗೆ ದೂರವಾಣಿ: 9986146086 ಅಥವಾ 22183456 ಅನ್ನು ಸಂಪರ್ಕಿಸಬಹುದು.**

# ರ್ಗಸೂಚಿ: ತಡೆ ಮುಂದುವರಿಕೆ

## ೂಜ್ಞೆ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆಗೆ ಹೈಕೋರ್ಟ್ ನಕಾರ

## 0 ಕೋಟಿ ರು. ತ್ಯಾಜ್ಯ ವಿಲೇವಾರಿ ಟೆಂಡರ್‌ಗೆ ತಡೆ

ಪುಟದಿಂದ:
ದಾಗಿ ತ್ಯಾಜ್ಯ ವಿಲೇವಾರಿಗೆ ಕರೆಯಲು ಂಡರ್ ಪ್ರಕ್ರಿಯೆಗೆ ತಾತ್ಕಾಲಿಕ ತಡೆಯಾಜ್ಞೆ ಬಿಬಿಎಂಪಿಗೆ ನೋಟಿಸ್ ಜಾರಿ ಮಾಡಿತು.

**ಂಡರ್:** ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಗ್ರಹ ್ಯವನ್ನು ಸ್ವಚ್ಛಗೊಳಿಸುವುದು ಮತ್ತು ವಿಲೇ ು ವರ್ಷಕ್ಕೆ 300 ಕೋಟಿ ರು.ನಂತೆ 30 ವಧಿಗೆ ಗುತ್ತಿಗೆ ನೀಡಲು ಆಸಕ್ತರಿಂದ ಾರಿ 2009ರ ಸೆ.30ರಂದು ಅಧಿಸೂಚನೆ

ೂಚನೆ ಪ್ರಕಾರ ಕಸ ಸಂಗ್ರಹಣೆಯ ರ್ಮಾಣ, ನಿರ್ವಹಣೆ ಮತ್ತು ವಿಲೇವಾರಿ ದಾರರೇ ನೋಡಿಕೊಳ್ಳಬೇಕಿತ್ತು. ಕಸ ಬಿಎಂಪಿಗೆ ಇತ್ತೀಚೆಗೆ ಸೇರ್ಪಡೆಯಾದ ಶಗಳಲ್ಲೇ ವರ್ಷಕ್ಕೆ 150 ಕೋಟಿ ರು. ಎಂಬ ಕಾರಣ ನೀಡಿ ಟೆಂಡರ್ ಮೊತ್ತ 300 ಕೋಟಿ ರು. ನಿಗದಿಪಡಿಸಲಾಗಿತ್ತು. ಎಂ.ಪಾರಿ ಮತ್ತಿತರರು ಹೈಕೋರ್ಟ್ ಸಿದ್ದಾರೆ.

■ **ಅರ್ಜಿದಾರರ ವಾದ:** ಬಿಎಂಪಿ ಚುನಾಯಿತ ಸದಸ್ಯರ ಅಧಿಕಾರಾವಧಿ 2006ರ ನವೆಂಬರ್‌ಗೆ ಪೂರ್ಣಗೊಂಡಿದೆ. ನಂತರ ಅದು ಬಿಬಿಎಂಪಿಯಾಗಿ ಬದಲಾಗಿದೆ. ಇದೀಗ ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿದೆ. ಚುನಾವಣೆ ಸಮೀಪಿಸುತ್ತಿರುವಾಗ ಇಂತಹ ನಿರ್ಣಯ ತೆಗೆದುಕೊಳ್ಳುವುದು ಸರಿಯಲ್ಲ.


ಸದ್ಯಕ್ಕೆ ಬಿಬಿಎಂಪಿಯಲ್ಲಿ ಚುನಾಯಿತ ಸದಸ್ಯರು ಅಥವಾ ಜನರಿಂದ ಆಯ್ಕೆಯಾದ ಆಡಳಿತ ಮಂಡಳಿ ಇಲ್ಲ. ಹೀಗಿರುವಾಗ ಸಾವಿರಾರು ಕೋಟಿ ರು. ಮೊತ್ತದ ಟೆಂಡರ್ ವಿಚಾರದಲ್ಲಿ ಚುನಾಯಿತ ಸದಸ್ಯರಿಲ್ಲದೆ ಕೇವಲ ಅಧಿಕಾರಿಗಳು ಮಾತ್ರ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತವಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಪ್ರಸ್ತುತ ತ್ಯಾಜ್ಯ ವಿಲೇವಾರಿಗೆ ನೀಡಿರುವ ಟೆಂಡರ್ ಅವಧಿ 2010ರ ಮಾರ್ಚ್ 31ರವರೆಗೆ ಇದೆ. 2005ರಲ್ಲಿ ಬಿಎಂಪಿ ಚುನಾಯಿತ ಸದಸ್ಯರು ಇದ್ದ ಸಂದರ್ಭದಲ್ಲಿ ತ್ಯಾಜ್ಯ ವಿಲೇವಾರಿಗೆ ಟೆಂಡರ್ ಕರೆಯಲಾಗಿತ್ತು. ನಂತರ 2007ರಲ್ಲಿ ಕೆಲಸದ ಆದೇಶ ಹೊರಡಿಸಲಾಗಿತ್ತು. ಹಾಲಿ ಟೆಂಡರ್ ಅವಧಿ ಕೊನೆಗೊಳ್ಳುವ ಮುನ್ನವೇ ಬಿಬಿಎಂಪಿ ಚುನಾವಣೆ ನಡೆದು ಮೇಯರ್ ಆಯ್ಕೆ ನಡೆಯುತ್ತದೆ. ಹೀಗಾಗಿ ತರಾತುರಿಯಲ್ಲಿ ಟೆಂಡರ್ ಕರೆಯಬೇಕಾದ ಅಗತ್ಯವಿಲ್ಲ ಎನ್ನುವುದು ಅರ್ಜಿದಾರರ ವಾದ.

### ಹಾಲಿ ಟೆಂಡರ್ ಮುಂದುವರಿಕೆ

ಕಸ ವಿಲೇವಾರಿಗೆ ಬಿಬಿಎಂಪಿ ಕರೆದಿದ್ದ ಟೆಂಡರ್‌ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರೂ ಪ್ರಸ್ತುತ ಕಸ ವಿಲೇವಾರಿಗೆ ಗುತ್ತಿಗೆ ಪಡೆದಿರುವವರಿಗೆ ಯಾವುದೇ ತೊಂದರೆ ಇಲ್ಲ. ಈ ಹಿಂದೆ ನಿಗದಿ ಪಡಿಸಿದ್ದಂತೆ 2010ರ ಮಾರ್ಚ್ 31ರವರೆಗೆ ಕಸ ವಿಲೇವಾರಿ ಪ್ರಕ್ರಿಯೆ ಯತಾಸ್ಥಿತಿ ಮುಂದುವರೆಯಲಿದೆ.





# ಮೊಬೈಲ್ ಅಂಗಡಿಗಳಲ್ಲಿ ಸರಣಿಗಳವು

**ಬೆಂಗಳೂರು:** ವಿಜಯನಗರದ ಆರ್‌ಪಿಸಿ ಬಡಾವಣೆಯಲ್ಲಿರುವ ಎರಡು ಮೊಬೈಲ್ ಅಂಗಡಿಗಳಲ್ಲಿ ಸೋಮವಾರ ಮಧ್ಯರಾತ್ರಿ ಸರಣಿ ಕಳವು ನಡೆದಿದೆ.

ಅಂಬಿ ಸಿಮ್ ಸಿಟಿ ಹಾಗೂ ವಿ.ಕೆ.ಮೊಬೈಲ್ಸ್ ಮಳಿಗೆಗಳ ಶಟರ್ ಮೀಟಿರುವ ದುಷ್ಕರ್ಮಿಗಳು, ಸುಮಾರು ಎರಡು ಲಕ್ಷ ರು. ಮೊತ್ತದ ಮೊಬೈಲ್‌ಗಳನ್ನು ದೋಚಿದ್ದಾರೆ. ಈ ಸಂಬಂಧ ಸುರೇಶ್ ಹಾಗೂ ವಿಜಯ್ ಕುಮಾರ್ ಎಂಬುವರು ವಿಜಯನಗರ ಪೊಲೀಸರಿಗೆ ದೂರು ನೀಡಿದ್ದಾರೆ.

■ **ನಕಲಿ ಪೊಲೀಸರ ಸುಲಿಗೆ:** ಪೊಲೀಸರ ಸೋಗಿನಲ್ಲಿ ಒಂಬತ್ತು ಮಂದಿ ಕೇರಳದವರನ್ನು ಅಡ್ಡಗಟ್ಟಿ ಆರು ಮೊಬೈಲ್ ಹಾಗೂ ನಾಲ್ಕು ಸಾವಿರ ರು. ನಗದನ್ನು ದೋಚಿರುವ ಘಟನೆ ಕಬ್ಬನ್ ಪಾರ್ಕ್‌ನಲ್ಲಿ ನಡೆದಿದೆ.

ಎಚ್‌ಎಎಲ್ ಜಗದೀಶ್‌ನಗರದ ನಿವಾಸಿ ಫೈಜಲ್ ಎಂಬುವರು ಕಬ್ಬನ್ ಪಾರ್ಕ್ ಪೊಲೀಸರಿಗೆ ದೂರು ನೀಡಿದ್ದು, ಸೋಮವಾರ ಸಂಜೆ ಕಬ್ಬನ್ ಪಾರ್ಕಿನಲ್ಲಿ ಸುತ್ತಾಡುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಬಂದು ಈ ಕೃತ್ಯವೆಸಗಿದ್ದಾರೆ ಎಂದು ತಿಳಿಸಿದ್ದಾರೆ.

■ **ದ್ವಿಚಕ್ರ ವಾಹನ ಕಳ್ಳರ ಸೆರೆ:** ದ್ವಿಚಕ್ರ ವಾಹನ ಕಳವು ಆರೋಪದ ಮೇಲೆ ರಘುವನಹಳ್ಳಿಯ ಉಮೇಶ್, ಸಾರಕ್ಕಿ ಮುಖ್ಯರಸ್ತೆಯ ಜೈಶಂಕರ್ ಹಾಗೂ ವೆಂಕಟೇಶ್ ಎಂಬುವರನ್ನು ಬಂಧಿಸಿರುವ ಜೆ.ಪಿ.ನಗರ ಪೊಲೀಸರು 2.50 ಲಕ್ಷ ರು. ಮೊತ್ತದ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ರಿಯಲ್ ಎಸ್ಟೇಟ್, ಪ್ಲೇವಿನ್‌ನಲ್ಲಿ ನಷ್ಟವಾಗಿದ್ದರಿಂದ ಆರೋಪಿಗಳು ವಾಹನ ಕಳವು ಕೃತ್ಯಕ್ಕೆ ಇಳಿದಿದ್ದರು. ಇವರ ವಿರುದ್ಧ ವಿವಿಧ ಠಾಣೆಗಳಲ್ಲಿ ಮೂರು ಕಳವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ
ಊರು ಕೇರಿ 13-10-2009 ನಗರ

# ಪರಿಸರ ಪೋಷಣೆಯಿಂದ ಮಾನವನ ಉಳಿವು

ಬೆಂಗಳೂರು, ಅ. 12: ಮಾನವ ಸಂತತಿ ಉಳಿವಿಕೆಯು ಪ್ರಾಣಿ ಮತ್ತು ಸಸ್ಯ ವರ್ಗಗಳ ಮೇಲೆ ಅವಲಂಬಿತವಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಡಾ. ಎನ್. ಪ್ರಭುದೇವ್ ಅಭಿಪ್ರಾಯ ಪಟ್ಟಿದ್ದಾರೆ.

ನಗರದಲ್ಲಿ ಜ್ಞಾನಭಾರತಿ ಜೀವಶಾಸ್ತ್ರ ವಿಭಾಗದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಜೀವವೈವಿಧ್ಯತೆ ಅರಿವು, ಉಳಿವು ಮತ್ತು ಉಪಯುಕ್ತತೆ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೀವವೈವಿಧ್ಯತೆ ಜೀವನದ ಒಂದು ಭಾಗ ಅದರಲ್ಲಿರುವ ಅನೇಕ ಸಂಪನ್ಮೂಲಗಳ ಮೇಲೆ ಮುಂದಿನ ಪೀಳಿಗೆ ಅವಲಂಬಿತವಾಗಿದೆ ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಕೆ. ವಿ. ದೇವರಾಜ್ ಮಾತನಾಡಿ, ಇಂದು ಪರಿಸರ ಸಮತೋಲನ ಬಹಳ ಅವಶ್ಯಕವಾಗಿದೆ. ಜೀವ ವೈವಿಧ್ಯತೆಯಲ್ಲಿ ನೀರಿನಾಂಶ, ಇಂಧನ, ಪರಿಸರ ವಿಕೋಪ, ಪ್ರವಾಹ, ಬರ ಮತ್ತು ಆಹಾರ ಕೊರತೆ ಮನುಷ್ಯ ಚಟುವಟಿಕೆಯಿಂದಾಗುತ್ತದೆ. ಪರಿಸರವನ್ನು ಪೋಷಿಸಿದರೆ ಮಾನವನ ಉಳಿವಿಕೆಗೆ ಅದು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗೌರವಾನ್ವಿತ ವಿಜ್ಞಾನಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಡಾ. ರಾಮಚಂದ್ರ ಮೋಹನ್, ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರವಚಕಿ ಬೇಲಾ ಜುಟ್ಷಿ ಮತ್ತು ಡಾ. ನಾಗರಾಜ್ ಅವರನ್ನು ಗೌರವಿಸಲಾಯಿತು.




*ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ ಜೈವಿಕ ವೈವಿಧ್ಯ ಕುರಿತು ಕಾರ್ಯಾಗಾರದಲ್ಲಿ ಕುಲಪತಿ ಡಾ. ಎನ್. ಪ್ರಭುದೇವ್ 2009ನೇ ಸಾಲಿನ ಅತ್ಯುತ್ತಮ ವಿಜ್ಞಾನಿ ಪ್ರಶಸ್ತಿ ಪಡೆದ ಡಾ. ಬೇಲಾಜುಟ್ಷಿ ಅವರನ್ನು ಸನ್ಮಾನಿಸಿದರು. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಮಹದೇವಪ್ಪ, ಆಂಧ್ರ ವಿಶ್ವವಿದ್ಯಾನಿಲಯದ ಡಾ. ಸೋಲಮನ್‌ರಾಜು, ಬೆಂಗಳೂರು ವಿಶ್ವವಿದ್ಯಾನಿಲಯದ ಕುಲ ಸಚಿವ ಡಾ. ಟಿ. ಆರ್. ಸುಬ್ರಮಣ್ಯ, ಪ್ರವಚಕ ಡಾ. ಶಂಕರ್‌ರೆಡ್ಡಿ ಉಪಸ್ಥಿತರಿದ್ದರು.*

# ಜೀವ ವೈವಿಧ್ಯಗಳ ರಕ್ಷಣೆ: ಜನ ಜಾಗೃತಿಗೆ ಕರೆ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ಜೀವ ವೈವಿಧ್ಯಗಳ ಆಹಾರ ಮತ್ತು ಹವಾಮಾನ ಬಗ್ಗೆ ಜನ ಜಾಗೃತಿ ಮೂಡಿಸಬೇಕಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಎನ್. ಪ್ರಭುದೇವ್ ಹೇಳಿದರು.

ಜೀವನೋಪಾಯಕ್ಕಾಗಿ ಅರಣ್ಯ ಉತ್ಪನ್ನವನ್ನೇ ನಂಬಿರುವ ಆದಿವಾಸಿ ಜನರಿಗೆ ಸಸ್ಯ ಪ್ರಭೇದಗಳು ಮತ್ತು ಜೀವ ಪ್ರಭೇದಗಳ ಮಹತ್ವ ತಿಳಿಸಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯ ಪ್ರಾಣಿಶಾಸ್ತ್ರ ವಿಭಾಗ 'ಜೀವವೈವಿಧ್ಯಗಳ ಅರಿವು, ರಕ್ಷಣೆ ಮತ್ತು ಉಪಯೋಗ' ಕುರಿತು ಸೋಮವಾರ ಏರ್ಪಡಿಸಿದ್ದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಣಿಶಾಸ್ತ್ರ ವಿಭಾಗದಿಂದ ವಿವಿಧೆಡೆ ಇರುವ ಜೀವ ವೈವಿಧ್ಯಗಳ ಬಗ್ಗೆ ಸಂಶೋಧನೆ ಮಾಡಬೇಕು.



'ಜೀವವೈವಿಧ್ಯಗಳ ಅರಿವು, ರಕ್ಷಣೆ ಮತ್ತು ಉಪಯೋಗ' ಕಾರ್ಯಾಗಾರದಲ್ಲಿ ಡಾ.ಎಂ. ರಾಮಚಂದ್ರ ಮೋಹನ್, ಪ್ರೊ.ಎ.ಜೆ. ಸೋಲಮನ್ ರಾಜು, ಡಾ.ಕೆ.ವಿ. ದೇವರಾಜ್, ಡಾ.ಎನ್. ಪ್ರಭುದೇವ್, ಡಾ.ಎಂ. ಮಹಾದೇವಪ್ಪ, ಡಾ.ಟಿ.ಆರ್. ಸುಬ್ರಹ್ಮಣ್ಯ ಇದ್ದರು

ಔಷಧೀಯ ಸಸ್ಯಗಳನ್ನು ಗುರುತಿಸಬೇಕು. ವಿಭಾ ದಿಂದ ಈ ಕುರಿತು ಸ್ನಾತಕೋತ್ತರ ಡಿಪ್ಲೊಮ ಕೋರ್ಸ್ ಆರಂಭಿಸಲು ಯೋಜನೆ ಹಾಕಿಕೊಂ ರುವುದು ಮತ್ತೊಂದು ಮೈಲಿಗಲ್ಲು ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿಶ್ರಾ ಕುಲಪತಿ ಡಾ.ಕೆ.ವಿ. ದೇವರಾಜ್ ಮಾತನಾಡಿ, ಜ ತಿಕ ತಾಪಮಾನದಿಂದ ಜೀವ ವೈವಿಧ್ಯಗಳ ಉಳಿ ತೊಂದರೆಯಾಗುತ್ತಿದೆ. ಮಾನವನ ಸ್ವಾರ್ಥವು ಜೀ ರಾಶಿಗಳ ಉಳಿವಿಗೆ ಮಾರಕವಾಗುತ್ತಿದೆ. ಜೀವ ವೈವಿ ಗಳಿಗೆ ಪೂರಕವಾಗಿ ಆಹಾರ ಮತ್ತು ಹವಾಮ ಒದಗಿಸುವ ಕೆಲಸ ಆಗಬೇಕಿದೆ ಎಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ವಿಶ್ರಾಂತ ಕ ಪತಿ ಡಾ.ಎಂ. ಮಹಾದೇವಪ್ಪ, ಆಂಧ್ರ ವಿವಿ ಪರಿ ವಿಜ್ಞಾನ ವಿಭಾಗ ಮುಖ್ಯಸ್ಥ ಪ್ರೊ.ಎ.ಜೆ. ಸೋಲಮ ರಾಜು, ಬೆಂಗಳೂರು ವಿವಿ ರಿಜಿಸ್ಟ್ರಾರ್ ಡಾ.ಟಿ.ಆ ಸುಬ್ರಹ್ಮಣ್ಯ, ಪ್ರಾಣಿಶಾಸ್ತ್ರ ವಿಭಾಗದ ಮುಖ ಡಾ.ಎಂ. ರಾಮಚಂದ್ರ ಮೋಹನ್ ಇದ್ದರು.